**ದಿನಾಂಕ: 18–01–2021 ರಂದು ಬೆಳಿಗ್ಗೆ 11.00 ಘಂಟೆಗೆ ಜಿಲ್ಲಾ ಪಂಚಾಯತ ಉತ್ತರ ಕನ್ನಡ ಕಛೇರಿ ಸಭಾ ಭವನದಲ್ಲಿ ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಮಾನ್ಯ ಲೋಕಸಭಾ ಸದಸ್ಯರು ಉತ್ತರ ಕನ್ನಡ–12 ಹಾಗೂ ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ (ದಿಶಾ) ಸಮಿತಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭೀವೃದ್ಧಿ ಮತ್ತು ಉಸ್ತುವಾರಿ (ದಿಶಾ) ಸಮಿತಿ ಸಭೆಯ ನಡವಳಿಗಳು.**

ಪ್ರಾರಂಭದಲ್ಲಿ ಮುಖ್ಯ ಯೋಜನಾಧಿಕಾರಿಗಳು ಮತ್ತು ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ) ಉತ್ತರ ಕನ್ನಡ ಜಿಲ್ಲಾ ಪಂಚಾಯತ ಕಾರವಾರ ರವರು ಸಭೆಗೆ ಆಗಮಿಸಿದ ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಲೋಕಸಭಾ ಸದಸ್ಯರು ಉತ್ತರ ಕನ್ನಡ ಕ್ಷೇತ್ರ–12 ಹಾಗೂ ಅಧ್ಯಕ್ಷರು, ಉತ್ತರ ಕನ್ನಡ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ (ದಿಶಾ) ಸಮಿತಿ ಇವರಿಗೆ ಸ್ವಾಗತ ಕೋರಿದರು. ಅದರಂತೆ ಸಭೆಗೆ ಹಾಜರಿದ್ದ ಮಾನ್ಯ ಅಧ್ಯಕ್ಷರು ಜಿಲ್ಲಾ ಪಂಚಾಯತ ಉತ್ತರ ಕನ್ನಡ ರವರನ್ನು, ಮಾನ್ಯ ಸದಸ್ಯರು ವಿಧಾನ ಪರಿಷತ್ ರವರನ್ನು ಮಾನ್ಯ ಜಿಲ್ಲಾಧಿಕಾರಿಗಳು ಉತ್ತರ ಕನ್ನಡ, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಉತ್ತರ ಕನ್ನಡ ಹಾಗೂ ಉತ್ತರ ಕನ್ನಡ ಪೋಲೀಸ್ ಅಧೀಕ್ಷಕರು ಹಾಗೂ ದಿಶಾ ಸಭೆಯ ನಾಮನಿರ್ದೇಶಿತ ಸದಸ್ಯರುಗಳನ್ನು ಹಾಗೂ ತಾಲೂಕ ಪಂಚಾಯತ ಅಧ್ಯಕ್ಷರನ್ನು ಸ್ವಾಗತಿಸಿದರು ಅದೇ ರೀತಿ ಸಭೆಯಲ್ಲಿ ಉಪಸ್ಥಿತಿರದ್ದ ಎಲ್ಲಾ ಅಧಿಕಾರಿಗಳನ್ನು ಹಾಗೂ ಪತ್ರಿಕಾ ಮಾಧ್ಯಮ ಮತ್ತು ದೃಶ್ಯ ಮಾದ್ಯಮದ ಪ್ರತಿನಿದಿಗಳನ್ನು ಸ್ವಾಗತಿಸಿ ಈ ದಿನದ ಸಭೆಯ ಅದ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ಸಡೆಸಿಕೊಡುವಂತೆ ದಿಶಾ ಸಮಿತಿ ಅಧ್ಯಕ್ಷರು ಹಾಗೂ ಮಾನ್ಯ ಸಂಸದರಲ್ಲಿ ವಿನಂತಿಸಿಕೊಂಡರು.

ಮಾನ್ಯ ಸಂಸದರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಪ್ರಾರಂಭದಲ್ಲಿ ದಿನಾಂಕ:18–06–2020 ರಂದು ಜರುಗಿದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ ಸಮಿತಿ) ಸಭೆಯ ನಡವಳಿಗಳ ಮೇಲೆ ಸಂಬಂಧಿಸಿದ ವಿವಿಧ ಇಲಾಖೆಯ ಅನುಪಾಲನಾ ವರದಿಯನ್ನು ಪರಿಶೀಲಿಸಿದರು.

1. **<u>ಕೃಷಿ ಇಲಾಖೆ:</u>**

ಜಿಲ್ಲೆಯಲ್ಲಿ ಪಾಮರೋಸ ಮತ್ತು ಟೆಪ್ ಬೆಳೆಗಳ ಕುರಿತು ಚರ್ಚಿಸಿ ಟೆಪ ಬೆಳೆಗಳಿಗೆ ಮಾರುಕಟ್ಟೆಯ ಅನಾನುಕೂಲವಿರುವದರಿಂದ ಟೆಪ್ ಬೆಳೆಯನ್ನು ಮಿತಿಗೊಳಿಸಿ ಬದಲಿಗೆ ಪಾಮರೋಸ ಸಿಕ್ನೇಲಾ ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡಲು ಸೂಚಿಸಿದರು. ಈಗಾಗಲೇ ಭಟ್ಕಳದಲ್ಲಿ ಬೆಳೆಯುತ್ತಿರುವುದಾಗಿ ತಿಳಿಸಿದರು. ಪಾಮರೋಸ್ ಒಣ ಭೂಮಿಯಲ್ಲೂ ಬೆಳೆಯುವ ಬೆಳೆಯಾಗಿದ್ದು, ಹಳಿಯಾಳ/ಮುಂಡಗೋಡ ಇತರೇ ಘಟ್ಟದ ಮೇಲ್ಭಾಗದ ತಾಲೂಕುಗಳಲ್ಲಿ ತುಂಬಾ ಉಪಯುಕ್ತವಾಗಿರುತ್ತದೆ. ಈ ಬೆಳೆಗೆ ಅತೀ ಕಡಿಮೆ ನೀರಿನ ಪ್ರಮಾಣ ಸಾಕಾಗುತ್ತದೆ. ರೈತರು ಕೇವಲ ಭತ್ತದ ಬೆಳೆಯನ್ನು ಅವಲಂಭಿಸಿರುವುದರಿಂದ ಕಡಿಮೆ ಆದಾಯ ಹೊಂದಿರುತ್ತಾರೆ. ಆದ್ದರಿಂದ ಸದರಿ ಭೂಮಿಯಲ್ಲಿ ಪಾಮರೋಸ್ ಬೆಳೆಯನ್ನು ಬೆಳೆಯುವುದರಿಂದ ರೈತರಿಗೆ ಮೌಲ್ಯವರ್ಧನೆ (Value Addition) ನೀಡಿದಂತಾಗುತ್ತದೆ. ಈ ಬೆಳೆಯು ರೈತರಿಗೆ ತುಂಬಾ ಆದಾಯ ನೀಡುವಂತಹ ಬೆಳೆಯಾಗಿದ್ದು ಸದರಿ ಬೆಳೆಯಿಂದ ಪೂರಕವಾಗಿ ಗೃಹ ಉಧ್ಯಮದ ಬೆಳವಣಿಗೆ ಸಾಧ್ಯವಾಗುತ್ತದೆ, ಆದ್ದರಿಂದ ಪಾಮರೋಸ್ ಬೆಳೆ ಬೆಳೆಯಲು ಉತ್ತೇಜನ ನೀಡುವಂತೆ ಕೃಷಿ ಇಲಾಖೆಗೆ ಸಭಾಧ್ಯಕ್ಷರು ಸೂಚಿಸಿದರು.

ಆತ್ಮಾ ಯೋಜನೆಯಡಿ ಕೃಷಿ ಯಂತ್ರೋಪಕರಣ ನೀಡುವ ಕುರಿತು ಚರ್ಚಿಸಲಾಗಿ ಈಗಾಗಲೇ ರಾಜ್ಯ ಸರ್ಕಾರದಿಂದ ಉತ್ತರಕನ್ನಡ ಜಿಲ್ಲೆಗೆ ಒಟ್ಟೂ 22 ಯುನಿಟ್‌ಗಳ ಗುರಿ ನೀಡಲಾಗಿದ್ದು, ಈಗಾಗಲೇ ಸಿದ್ದಾಪುರ ಮತ್ತು ಅಘ್ನಾಶಿನಿಯಲ್ಲಿ ಬೇಡಿಕೆ ನೀಡಿರುವುದಾಗಿ ಕೃಷಿ ಇಲಾಖೆ ಅಧಿಕಾರಿಗಳು ಸಭೆಗೆ ವಿವರಿಸಿದರು. ಕೊನೆಯಲ್ಲಿ ಕೃಷಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕಾಮಗಾರಿಗಳನ್ನು ನಿಗಧಿತ ಗುರಿಯಂತೆ ವರ್ಷಾಂತ್ಯಕ್ಕೆ ಪೂರ್ಣಗೊಳಿಸಲು ಸೂಚಿಸಿದರು.

**(ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ)**

2. **ತೋಟಗಾರಿಕೆ ಇಲಾಖೆ:**

ಶಿರಸಿ ತಾಲೂಕಿನಲ್ಲಿ ಈಗಾಗಲೇ ಒಂದು F.P.O ರಚಿಸಲಾಗಿದ್ದು, ಇನ್ನೊಂದು ಜೇನುಕೃಷಿಕರ F.P.O ನ್ನು ಸಿದ್ದಾಪುರ ತಾಲೂಕಿನಲ್ಲಿ 2020-21 ನೇ ಸಾಲಿನಲ್ಲಿ ರಚಿಸಲಾಗುವುದು ಎಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದರು. F.P.O ರಚಿಸುವಾಗ ಸ್ಫೂರ್ತಿ ಯೋಜನೆಯಿಂದ ರಚಿತವಾಗಿರುವ ಕ್ಲಸ್ಟರ್ ಗಳನ್ನು ಮತ್ತೊಮ್ಮೆ ಪರಿಗಣಿಸದಂತೆ ನಿಗಾವಹಿಸಲು ಮಾನ್ಯ ಸಂಸದರು ಸೂಚಿಸಿದರು.

ಜೇನು ಪೆಟ್ಟಿಗಳನ್ನು ಸ್ಥಳೀಯ ವಸ್ತುಗಳನ್ನು ಬಳಸಿ ತಯಾರಿಸುವ ಕುರಿತು, ಜೇನು ಹುಳುಗಳಿಗೆ ಸಕ್ಕರೆ ನೀರಿನ ಬದಲಿಗೆ ಬೇರೆ ಆಹಾರ ಕೊಡುವ ಕುರಿತು ಮತ್ತು ಹೆಜ್ಜೇನು ಕೊಯ್ಲು ಮಾಡುವ ಕುರಿತು ಏಪ್ರಿಲ್-ಮೇ ತಿಂಗಳಲ್ಲಿ ಕಾರ್ಯಾಗಾರ ನಡೆಸುವುದಾಗಿ ಉಪನಿರ್ದೇಶಕರು ತಿಳಿಸಿದರು. ಪ್ರಸ್ತುತ ಬಳಸುತ್ತಿರುವ ಮರಗಳ ಪೆಟ್ಟಿಗೆಯೇ ಹೆಚ್ಚು ಸೂಕ್ತ ಮತ್ತು ಮಳೆಗಾಲದಲ್ಲಿ ಜೇನು ಹುಳುಗಳಿಗೆ ಸಕ್ಕರೆ ದ್ರಾವಣ ಅಥವಾ ಜೇನು ತುಪ್ಪವನ್ನು ಅರ್ಧ ಭಾಗ ನೀರಿನೊಂದಿಗೆ ನೀಡುವುದು ಹೆಚ್ಚು ಸೂಕ್ತ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿರುವುದಾಗಿ ಉಪನಿರ್ದೇಶಕರು ತಿಳಿಸಿದರು. ಬಹು ಪಾಲು ಕಂಪನಿಗಳ ಜೇನುತುಪ್ಪವು ಸಕ್ಕರೆ ದ್ರಾವಣ ಮಿಶ್ರವಾಗಿರುತ್ತದೆ ಎಂದು ಮಾನ್ಯ ಸಂಸದರು ತಿಳಿಸಿದರು. ಸಕ್ಕರೆ ದ್ರಾವಣಕ್ಕೆ ಬದಲಿ ಆಹಾರ ನೀಡುವ ಕುರಿತು ಸಂಶೋಧನೆ ಅಗತ್ಯವಿದೆ ಎಂದು ತಿಳಿಸಿದರು.

ಸ್ಥಳೀಯ ಜೇನು ಪ್ರಭೇಧವನ್ನು ವೃದ್ಧಿಪಡಿಸಿ ವಿತರಿಸುವ ಸಲುವಾಗಿ ತೋಟಗಾರಿಕೆ ಇಲಾಖೆಯವತಿಯಿಂದ ಖಾಸಗಿ ಮಧುವನ ಸ್ಥಾಪನೆಗೆ ರೂ. 75000 ಸಹಾಯಧನ ನೀಡಲಾಗುತ್ತಿದ್ದು, ಈ ಸಾಲಿನಲ್ಲಿ 22 ಮಧುವನಗಳಿಗೆ ಸಹಾಯಧನ ನೀಡಲಾಗುವುದು ಎಂದು ಉಪನಿರ್ದೇಶಕರು ತಿಳಿಸಿದರು. ವಾರ್ಷಿಕವಾಗಿ ಎಲ್ಲ ಮಧುವನಗಳಿಂದ ಅಂದಾಜು 2000-2500 ಕುಟುಂಬಗಳು ಅಭಿವೃದ್ಧಿ ಹೊಂದಿ ವಿತರಣೆಯಾಗುತ್ತಿದೆ ಎಂದು ತಿಳಿಸಿದರು. ಮಧುವನಗಳು ಉತ್ತಮ ರೀತಿಯಿಂದ ಕರ್ತವ್ಯ ನಿರ್ವಹಿಸುವಂತೆ ನಿಗಾ ವಹಿಸಲು ಮಾನ್ಯ ಸಂಸದರು ತಿಳಿಸಿದರು.

ಜೇನು ಮರಗಳ ವಿವರವನ್ನು ಸಂಗ್ರಹಿಸಿರುವುದಾಗಿ ಹಾಗೂ ಹೆಜ್ಜೇನು ಕೊಯ್ಲು ಮಾಡುವ ಕುರಿತು ಕಾರ್ಯಾಗಾರವನ್ನು ತಜ್ಞರಾದ ಶ್ರೀ ಎನ್.ಎಸ್.ಭಟ್ ರವರಿಂದ ಏಪ್ರಿಲ್-ಮೇ ತಿಂಗಳಲ್ಲಿ ಕೈಗೊಳ್ಳುವುದಾಗಿ ಉಪನಿರ್ದೇಶಕರು ತಿಳಿಸಿದರು. ಡಾ.ಎನ್.ಎಸ್.ಭಟ್ ಅಥವಾ ಅವರ ಶಿಷ್ಯರಿಂದ ಕಾರ್ಯಾಗಾರ ಕೈಗೊಳ್ಳಲು ಸಂಸದರು ತಿಳಿಸಿದರು.

**(ಕ್ರಮ: ತೋಟಗಾರಿಕೆ ಉಪನಿರ್ದೇಶಕರು ,ಶಿರಸಿ)**

ಬಾಗಲಕೋಟೆ ತೋಟಗಾರಿಕೆ ವಿಶ್ವ ವಿದ್ಯಾಲಯಕ್ಕೆ ನೀಡಿದ್ದ 2.50 ಕೋಟಿ ರೂ. ಗಳನ್ನು ಹಿಂದಕ್ಕೆ ಪಡೆದಿರುವುದಾಗಿ ಉಪನಿರ್ದೇಶಕರು ಮಾಹಿತಿ ನೀಡಿದರು.

ಗೋಕರ್ಣ APMC ಪ್ರಾಂಗಣದಲ್ಲಿ ಗ್ರಾಮೀಣ ಮಾರುಕಟ್ಟೆ ನಿರ್ಮಾಣ ಕಾರ್ಯ ಬಹುತೇಕ ಮುಕ್ತಾಯವಾಗಿರುವುದಾಗಿ ಉಪನಿರ್ದೇಶಕರು ತಿಳಿಸಿದರು. ಶೀಘ್ರವಾಗಿ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲು ಮಾನ್ಯ ಸಂಸದರು ತಿಳಿಸಿದರು. ಗೋಕರ್ಣ ತರಕಾರಿ ಬೆಳೆಗಾರರ F.P.O ಸ್ಥಾಪನೆ ಕುರಿತು ನಬಾರ್ಡ್ ಅಧಿಕಾರಿಗಳೊಂದಿಗೆ ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: NABARD ಅಧಿಕಾರಿಗಳು, ಕಾರ್ಯನಿರ್ವಾಹಕ ಅಭಿಯಂತರರು, PRED ಮತ್ತುತೋಟಗಾರಿಕೆ ಉಪನಿರ್ದೇಶಕರು)**

ಜಿಲ್ಲೆಯ ಕೆಲವು ಬೆಳೆಗಳು ವಿಶಿಷ್ಟವಾಗಿದ್ದು ಅವುಗಳಿಗೆ G.I. ನೋಂದಣಿ ಮಾಡಿಸಲು ಕ್ರಮ ವಹಿಸಲು ಸಂಸದರು ಸೂಚಿಸಿದರು. ರಾಣಿ ಎಲೆ , ಕರಿ ಇಷಾಡ್ ಮಾವು, ಜೋಯಿಡಾ ಗೆಡ್ಡೆ ಗೆಣಸು, ಗೋಕರ್ಣ ಮೆಣಸಿನ ಕಾಯಿಗಳಿಗೆ G.I. ನೊಂದಣಿಗೆ ಕ್ರಮ ವಹಿಸಲಾಗುವುದು ಎಂದು ಉಪ ನಿರ್ದೇಶಕರು ತಿಳಿಸಿದರು. ಈ ಸಂಬಂಧ 15 ದಿನಗಳಲ್ಲಿ ಸಂಬಂಧಿಸಿದ ಬೆಳೆಗಳ ಬೆಳೆಗಾರರ ಸಭೆ ನಡೆಸಿ ಮಾಹಿತಿ ಪಡೆಯುವುದಾಗಿ ಉಪನಿರ್ದೇಶಕರು ತಿಳಿಸಿದರು.

ಕುಮಟಾ ಈರುಳ್ಳಿ ಶೇಖರಣೆ ವಿಧಾನದ ಕುರಿತು ಎರಡು ಮಾದರಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಸಂಸದರು ತಿಳಿಸಿದರು. 1) ರೈತರ ಕ್ಷೇತ್ರ ಮಟ್ಟದಲ್ಲಿ ಸಂಗ್ರಹಣೆ. 2) ಉದ್ಯಮದ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದ ಸಂಗ್ರಹಣೆ ಈ ಕುರಿತು ಮಾಹಿತಿ ಸಂಗ್ರಹಿಸಲು ಸೂಚಿಸಿದರು.

2020-21 ನೇ ಸಾಲಿನ ಕೇಂದ್ರವಲಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ SC/ST ಫಲಾನುಭವಿಗಳಿಗೆ ಈ ಸಾಲಿನಲ್ಲಿ ಹೊಂದಾಣಿಕೆ ಮೊತ್ತ (Matching Grant) ಲಭ್ಯವಿಲ್ಲದ ಕಾರಣ ಪೂರ್ಣ ಪ್ರಗತಿ ಸಾಧನೆ ಕಷ್ಟ ಸಾಧ್ಯವಾಗಿದೆ ಎಂದು ತೋಟಗಾರಿಕೆ ಉಪನಿರ್ದೇಶಕರು ಮಾಹಿತಿ ಮಂಡಿಸಿದರು.

**(ಕ್ರಮ: ತೋಟಗಾರಿಕೆ ಉಪನಿರ್ದೇಶಕರು,ಶಿರಸಿ)**

## 3. ಆರೋಗ್ಯ ಇಲಾಖೆ

ಅಜಿನೋಮೊಟೊ ಕುರಿತು ಚರ್ಚೆಗೆ ಸಂಬಂಧಿಸಿದಂತೆ, ದಿನಾಂಕ: 11-01-2020 ರಿಂದ ಖಾಯಂ ಅಂಕಿತಾಧಿಕಾರಿಗಳು ಹಾಜರಾಗಿದ್ದು, ಪ್ರತಿ ತಾಲೂಕಿಗೆ ಭೇಟಿ ನೀಡಿ ಕಾರವಾರ -09, ಅಂಕೋಲಾ-04, ಕುಮಟಾ-03 ಹೊನ್ನಾವರ-04, ಭಟ್ಕಳ-06, ಶಿರಸಿ-41, ಹಳಿಯಾಳ-05, ಮುಂಡಗೋಡ-11, ಯಲ್ಲಾಪುರ-08 ಒಟ್ಟೂ 91 ಸ್ಥಳಗಳಲ್ಲಿ ಪರಿಶೀಲಿಸಿ ಜಾಗೃತಿ ಮೂಡಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಯವರು ಸಭೆಗೆ ವಿವರಿಸಿದರು.

ಅಜಿನೊಮೋಟೊ ಕುರಿತು ಹೋಟೆಲ್‌ಗಳಲ್ಲಿ ಅಲ್ಲದೇ ಅಜಿನೊಮೋಟೊ ಪೂರೈಸುವ ಅಂಗಡಿಗಳನ್ನು ಸಹ ಪರಿಶೀಲಿಸಿ, ಪ್ರಕರಣಗಳನ್ನು ದಾಖಲಿಸಲು ಸಭಾಧ್ಯಕ್ಷರು ಸೂಚಿಸಿದರು.

ಆಯುಷ್ಮಾನ್ ಕಾರ್ಡ್‌ಗಳ ಬಗ್ಗೆ ಪರಿಶೀಲಿಸಿದಾಗ ಇಲ್ಲಿಯವರೆಗೆ 573141 ರಷ್ಟು ವಿತರಿಸಿದೆ. ಅದರಲ್ಲಿ ಎ.ಪಿ.ಎಲ್ 85318 ಬಿ.ಪಿ.ಎಲ್ 487823 ಆಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕು.ಕ ಧಿಕಾರಿಗಳು ತಿಳಿಸಿದರು. ಆದ ಪ್ರಗತಿ ಬಗ್ಗೆ ಮಾನ್ಯ ಸಂಸದರು ಅಸಮಧಾನ ವ್ಯಕ್ತಪಡಿಸಿ ಎಲ್ಲಾ ಬಿ.ಪಿ.ಎಲ್ ಕಾರ್ಡ್‌ದಾರರಿಗೆ ಆಯುಷ್ಮಾನ್ ಕಾರ್ಡ್ ಲಭ್ಯವಾಗುವಂತೆ ನೋಡಿಕೊಳ್ಳಲು ತಿಳಿಸಿದರು. ಒಬ್ಬ ರೋಗಿಗೆ ಕಾರ್ಡ್ ವಿತರಿಸಲು 20 ರಿಂದ 30 ನಿಮಿಷ ತೆಗೆದುಕೊಳ್ಳುವುದರಿಂದ ರೋಗಿಗಳು ಕಾಯದೇ ವೈದ್ಯರ ಹತ್ತಿರ ತೆರಳುತ್ತಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಸಭೆಗೆ ತಿಳಸಿದರು. ಪಂಚಾಯತ್‌ವಾರು ಕಾರ್ಡ್ ವಿತರಿಸಲು ಕ್ರಮ ಕೈಗೊಳ್ಳಲು ಸಭಾಧ್ಯಕ್ಷರು ಸೂಚಿಸಿದರು.

- ಜಿಲ್ಲೆಯಲ್ಲಿ ರಕ್ತ ಹೀನತೆಯಿಂದ ಬಳಲುವವರ ಬಗ್ಗೆ ವಿಶೇಷ ಗಮನಹರಿಸಲು ತಿಳಿಸಿದರು. ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು ಗರ್ಭಿಣಿಯರ, ಬಾಣಂತಿಯರು ಮತ್ತು ಮಕ್ಕಳ ರಕ್ತಹೀನತೆಯನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು. ರಕ್ತಹೀನತೆಯನ್ನು ಪರಿಶೀಲಿಸಲು ಉಪಕೇಂದ್ರವಾರು ಕ್ರಿಯಾಯೋಜನೆಯನ್ನು ತಯಾರಿಸಿ ನೀಡುವುದಾಗಿ ತಿಳಿಸಿದರು.
- ಫೆಬ್ರುವರಿ ತಿಂಗಳಲ್ಲಿ 258 ಎಮ್.ಎಲ್.ಹೆಚ್.ಪಿ ಕಾರ್ಯಕರ್ತೆಯರು ಹಾಜರಾಗುತ್ತಿದ್ದು, ಅವರಿಂದ ಉಪಕೇಂದ್ರವಾರು ರಕ್ತಹೀನತೆ ಬಗ್ಗೆ ಪರೀಕ್ಷಿಸುವ ವ್ಯವಸ್ಥೆ ಮಾಡುವುದಾಗಿ ಹಾಗೂ ಅದಕ್ಕೆ ಅವಶ್ಯಕ ಅನುದಾನವನ್ನು ಎನ್.ಹೆಚ್.ಎಮ್ ಲಭ್ಯ ಅನುದಾನದಲ್ಲಿ ನೀಡುವುದಾಗಿ ತಿಳಿಸಿದರು.
- ಜಿಲ್ಲೆಗೆ 1400 ಆಶಾ ಕಾರ್ಯಕರ್ತೆಯರ ಗುರಿ ನೀಡಿದ್ದು, ಅದರಲ್ಲಿ 1395 ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ.
- ಗುಡ್ಡಗಾಡು ಪ್ರದೇಶಗಳಲ್ಲಿ ಸೇವೆ ನೀಡಲು ಹೆಚ್ಚಿನ ಕಾರ್ಯಕರ್ತೆಯರ ಅವಶ್ಯಕತೆ ಇದೆ ಎಂದು ತಿಳಿಸಿ ಹೆಚ್ಚಿನ ಹುದ್ದೆ ಪಡೆಯಲು ರಾಜ್ಯಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

- ಎಂಡೋಸಲ್ಫಾನ್ ಕುರಿತು ಸಭೆಗೆ ಈಗಾಗಲೇ ನಾಲ್ಕು ಸದರಿ ವಾಹನಗಳು ಕಾರ್ಯನಿರ್ವಹಿಸುತ್ತಿದ್ದು, ಮಾರ್ಚ-2021 ರಲ್ಲಿ ಸೇವಾ ಒಪ್ಪಂದವು ಪೂರ್ಣಗೊಳ್ಳುತ್ತಿದ್ದು, ಉತ್ತಮ ಸೇವೆ ನೀಡುತ್ತಿರುವ ಹಿನ್ನಲೆಯಲ್ಲಿ ಸದರಿ ಸೇವೆಯನ್ನು ಮುಂದಿನ 3 ವರ್ಷಗಳವರೆಗೆ ಮುಂದೂವರೆಸಲು ಹಾಗೂ ಫಿಜಿಯೋಥೆರಪಿಸ್ಟ್‌ಗಳ ಯುನಿಟ್ ನೀಡಿ ಅದರಿಂದ ಸ್ಥಳದಲ್ಲಿ ಸೇವೆ ನೀಡಲು ಅನುಕೂಲವೆಂದು ತಿಳಿಸಿದಾಗ ಘಟ್ಟದ ಮೇಲಿನ ತಾಲೂಕುಗಳಿಗೆ ಒಂದು ವಾಹನ ಮತ್ತು ಕರಾವಳಿ ಭಾಗದ ತಾಲೂಕುಗಳಿಗೆ ಒಂದು ವಾಹನವನ್ನು ನೀಡಿ ಅದರಲ್ಲಿ ಫಿಜಿಯೋಥೆರಪಿ ಘಟಕ ಅಳವಡಿಸಲು ಸಿ.ಎಸ್.ಆರ್ ಫಂಡ್‌ನಿಂದ ಖರೀದಿಸಿ ನೀಡಲು ಮಾನ್ಯ ಸಂಸದರು ಸೂಚಿಸಿದರು.
- ಆರೋಗ್ಯ ಬಂಧು ಕಾರ್ಯಕ್ರಮದಡಿಯಲ್ಲಿ ಗುಡ್ಡಗಾಡು ಪ್ರದೇಶದ ಪ್ರಾ.ಆ.ಕೇಂದ್ರಗಳನ್ನು ಪರಿಶೀಲಿಸಿ ಅಲ್ಲಿಗೆ ಎನ್.ಜಿ.ಓ ಸೇವೆ ಪಡೆಯುವುದು ಉತ್ತಮ ಎಂದು ಸಂಸದರು ತಿಳಿಸಿದರು. ಎರಡು ಪ್ರಾ.ಆ.ಕೇಂದ್ರಗಳಾದ ಡಿಗ್ಗಿ ಮತ್ತು ಕ್ಯಾಸಲ್‌ರಾಕನಲ್ಲಿ ಈ ಸೇವೆಯು ನಡೆಯುತ್ತದೆ ಎಂದು ತಿಳಿಸಿದರು ಹಾಗೂ ಈ ಜಿಲ್ಲೆಯಲ್ಲಿ ಶಿರಸಿ ತಾಲೂಕಿನ ಮೆಣಸಿ, ಕಕ್ಕಳ್ಳಿ, ಸಿದ್ದಾಪುರ ತಾಲೂಕಿನ ಕೊರ್ಲಕೈ, ಜೋಯಿಡಾ ತಾಲೂಕಿನ ಗುಂದ, ಉಳವಿ, ಹೊನ್ನಾವರ ತಾಲೂಕಿನ ಗೇರುಸೊಪ್ಪ, ಸಂಶಿ, ಕುಮಟಾ ತಾಲೂಕಿನ ಸಂತೇಗುಳಿ, ಯಲ್ಲಾಪುರ ತಾಲೂಕಿನ ಮಳವಳ್ಳಿ, ಕಳಚೆ, ಕುಂದರಗಿಗಳನ್ನು ಗುಡ್ಡಗಾಡು ಪ್ರದೇಶದ ಪ್ರಾ.ಆ.ಕೇಂದ್ರಗಳಾಗಿದ್ದು, ಅಲ್ಲಿ ಆರೋಗ್ಯ ಬಂಧು ಸೇವೆ ಪಡೆಯಲು ಅನುಕೂಲವಾಗುತ್ತೆ ಎಂಬ ಅಭಿಪ್ರಾಯವನ್ನು ಜಿಲ್ಲಾ ಆರೋಗ್ಯಾಧಿಕಾರಿಗಳು ವ್ಯಕ್ತಪಡಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳು, ಕಾರವಾರ)**

**4. ಶಿಕ್ಷಣ ಇಲಾಖೆ :**

ಅಕ್ಷರ ದಾಸೋಹ ಯೋಜನೆಯಡಿ ಪೂರೈಕೆಯಾಗುವ ಆಹಾರಧಾನ್ಯಗಳ ಗುಣಮಟ್ಟ ಉತ್ತಮವಾಗಿರುತ್ತಿದೆಯೆ ಹಾಗೂ ಗುಣಮಟ್ಟದ ಪರೀಕ್ಷೆ ಆಗುತ್ತಿದೇಯೆ ? ಎಂದು ಸಭಾಧ್ಯಕ್ಷರು ಪ್ರಶ್ನಿಸಿದರು. ಶಾಲೆಯಲ್ಲಿ ಮಕ್ಕಳು ಊಟ ಮಾಡದಿರುವ ಬಗ್ಗೆ ಕಾರಣ ತಿಳಿಸಲು ಹೇಳಿದರು. ಮದ್ಯಾಹ್ನದ ಬಿಸಿಯೂಟದ ಬಗ್ಗೆ ವಿಧ್ಯಾರ್ಥಿಗಳಿಂದ ಹಾಗೂ ಪೋಷಕರಿಂದ Feedback ಪಡೆಯಲು ತಿಳಿಸಿದರು. ಶಾಲಾ ಸಮಿತಿ ಪೋಷಕರಿಂದ ನೇರವಾಗಿ DC, CEO ತಾಲೂಕಾ ಪಂಚಾಯತ ಅಧ್ಯಕ್ಷರು, MLA ಗಳಿಗೆ ನೇರವಾಗಿ Feedback ಪತ್ರ ಬರೆಯುವ ಕುರಿತು ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

- ಮಾನ್ಯ ಜಿಲ್ಲಾಧಿಕಾರಿಗಳು ಶಾಲಾ ಸಮಿತಿ, ಪಾಲಕರಿಂದ Feedback ದಾಖಲಿಸಲು ಅನುಕೂಲವಾಗುವಂತೆ NIC ಯಿಂದ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಿರುವುದಾಗಿ ತಿಳಿಸಿದರು.

- ಮಾನ್ಯ ಸಭಾಧ್ಯಕ್ಷರು MLA ಹಾಗೂ ತಾಲೂಕಾ ಪಂಚಾಯತ ಸದಸ್ಯರು ಹಾಗೂ ದಿಶಾ ಸಮಿತಿಯ ಸದಸ್ಯರಿಗೆ ಶಾಲೆಗಳಿಗೆ ಭೇಟಿ ನೀಡಿ ಬಿಸಿಯೂಟದ ಗುಣಮಟ್ಟದ ಕುರಿತು ವಿಕ್ಷಣೆ ನಡೆಸಿ ತನಗೆ ವರದಿ ನೀಡಲು ತಿಳಿಸಿದರು.
- ಪ್ರಗತಿ ವರದಿ ಪರಿಶೀಲಿಸಿ ಪ್ರೌಡಶಾಲಾ ಅನುದಾನದ ಪ್ರಗತಿ ಕುಂಟಿತವಾಗಿರುವ ಬಗ್ಗೆ ಚರ್ಚಿಸಿದಾಗ ಸರ್ಕಾರವು ವಿದ್ಯಾರ್ಥಿಗಳ ಪರವಾಗಿ ಎಸ್.ಎಸ್.ಎಲ್.ಸಿ ಬಜೆಟ್‌ಗಳಿಗೆ ಹಾಗೂ ಶಾಲಾ ಮುಖ್ಯೋಪಾದ್ಯಾಯರ ಖಾತೆಗೆ ಹಣ ಜಮಾ ಮಾಡಲು ಅನುದಾನ ಬಿಡುಗಡೆ ಮಾಡಿದ್ದು ಈಗಾಗಲೇ ಎಸ್.ಎಸ್.ಎಲ್.ಸಿ ಬಜೆಟನಿಂದ ಹಣ ಭರಣ ಮಾಡಿದ್ದು ಮುಖ್ಯೋಪಾದ್ಯಾಯರ ಖಾತೆಗೆ ಜಮಾ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.ಹಾಗೂ ಶೀಘ್ರವೇ ಮುಂದಿನ ಅನುದಾನ ಬಿಡುಗಡೆ ಮಾಡುವುದಾಗಿ DDPI ಕಾರವಾರ/ಶಿರಸಿ ರವರು ಹೇಳಿದರು. ಸಭಾಧ್ಯಕ್ಷರು ಶಾಲೆಗಳ Audit ಕಾರ್ಯದ ಬಗ್ಗೆ ಪ್ರಶ್ನಿಸಲಾಗಿ ಎಲ್ಲಾ ಶಾಲೆಗಳನ್ನು 3 ವರ್ಷಗಳಿಗೊಮ್ಮೆ DDPI

ಕಛೇರಿಯಿಂದ Audit ಕಾರ್ಯ ನಡೆಸುತ್ತಿರುವುದಾಗಿ ಅಧಿಕಾರಿಗಳು ತಿಳಿಸಿದರು. ಸಭಾಧ್ಯಕ್ಷರು ಎಲ್ಲಾ ಶಾಲೆಗಳು Audit ಗೆ ಒಳಪಡಿಸಲಾಗುವುದೇ ಹೇಗೆ ಎಂದು ಖಚಿತಪಡಿಸಿಕೊಳ್ಳಲು ಸೂಚಿಸಿದರು.

**(ಕ್ರಮ : ಶಿಕ್ಷಣ ಇಲಾಖೆ ಉಪನಿರ್ದೇಶಕರು, ಕಾರವಾರ/ಶಿರಸಿ)**

## 5. SBM ( ಸ್ವಚ್ಛ ಭಾರತ ಅಭಿಯಾನ) :

ವಸತಿ ರಹಿತ ಯೋಜನೆಯಡಿ ಶೌಚಾಲಯ ರಹಿತ ಫಲಾನುಭವಿಗಳ ಸರ್ವೇ ಕಾರ್ಯ ಮಾಡಿದ್ದು, ಪೈಪಲೈನ್ ಸರ್ವೇಯಿಂದ ಹೊರಗುಳಿದ ಶೌಚಾಲಯ ರಹಿತ ಕುಟುಂಬಗಳ ಮಾಹಿತಿಯನ್ನು ಕಾರಣಗಳೊಂದಿಗೆ ಸಲ್ಲಿಸುವಂತೆ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮುಖ್ಯ ಕಾರ್ಯನಿರ್ವಹಣಾಕಾರಿಗಳು ಮಾನ್ಯ ಸಂಸದರ ಗಮನಕ್ಕೆ ತಂದು ಈ ಕುರಿತು ವರದಿ ಸಲ್ಲಿಸಲಾಗುವುದು ಎಂದು ಸಭ್ಯಾದ್ಯಕ್ಷರಿಗೆ ತಿಳಿಸಿದರು.

- 2020-21 ನೇ ಸಾಲಿನ ಘನತ್ಯಾಜ್ಯ ವಿಲೇವಾರಿ ಘಟಕ, ಸಮುದಾಯ ಶೌಚಾಲಯ, ಗೋಬ್ಬರ ಧನ ಘಟಕದ ಪ್ರಗತಿ ಕುರಿತು ಉಪಕಾರ್ಯದರ್ಶಿಗಳು (ಆಡಳಿತ)ರವರು ಸಭೆಗೆ ವಿವರಿಸಿದರು.

**(ಕ್ರಮ: ಜಿಲ್ಲಾ ಪಂಚಾಯತ, ಉತ್ತರಕನ್ನಡ ಕಾರವಾರ**

## 6. PMGSY: ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ

ಪ್ರಧಾನಮಂತ್ರಿ ಗ್ರಾಮ ಸಡಕ ಯೋಜನೆಯ ಪ್ರಗತಿ ವಿವರ ಪರಿಶೀಲಿಸಿದರು. ಪಿ.ಎಮ್.ಜಿ.ಎಸ್.ವೈ ಹಂತ-III ರಡಿ ಉತ್ತರ ಕನ್ನಡ ಜಿಲ್ಲೆಯ ಪ್ರತಿ ತಾಲೂಕುಗಳಿಗೆ ನಿಗದಿಪಡಿಸಲಾದ ಗುರಿಯಂತೆ ರಸ್ತೆಗಳ ಡಿ.ಪಿ.ಆರ್‌ಗಳನ್ನು ತಯಾರಿಸಿ ಅನುಮೋದನೆಗೆ ಸಲ್ಲಿಸಿರುವುದಾಗಿಯು ಹಾಗೂ ಸದರಿ ಕಾಮಗಾರಿಗಳಿಗೆ ಕೇಂದ್ರ ಕಛೇರಿಯಿಂದ ಟೆಂಡರ ಕರೆಯಲಾಗುವುದು ಎಂದು ಕಾರ್ಯನಿರ್ವಾಹಕ ಇಂಜೀನಿಯರರು ಸಭೆಗೆ ತಿಳಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜೀನಿಯರರು ಯೋಜನಾ ವಿಭಾಗ, ಕಾರವಾರ )**

## 7. PMAY/IAY (ವಸತಿ):

4600 ಫಲಾನುಭವಿಗಳ ಆಯ್ಕೆಯ ಪಟ್ಟಿಯನ್ನು ಕೂಡಲೇ ಸಲ್ಲಿಸಲು ತಿಳಿಸಲಾಯಿತು. 2019-20 ನೇ ಸಾಲಿನ ಮನೆಗಳ ಪ್ರಗತಿಯನ್ನು ಸಾದಿಸಿ ಕೂಡಲೇ ಮನೆಗಳನ್ನು ಮುಕ್ತಾಯಗೊಳಿಸಬೇಕಾಗಿ ತಿಳಿಸಲಾಯಿತು. ಈಗಾಗಲೇ ಸಾಕಷ್ಟು ಸಮಯ ನೀಡಿದರೂ ಫಲಾನುಭವಿಗಳು ಮನೆಗಳನ್ನು ಮುಕ್ತಾಯಗೊಳಿಸದಿರಲು ಕಾರಣವೇನು ಮತ್ತು ಸದರ ಫಲಾನುಭವಿಗಳು ಅರ್ಹ ಫಲಾನುಭವಿಗಳೇ ಅಥವಾ ಅನರ್ಹ ಫಲಾನುಭವಿಗಳೇ ಎಂದು ಪ್ರಶ್ನಿಸಿದರು.

ಇನ್ನೂವರೆಗೂ 240 ಮನೆಗಳು ಪ್ರಾರಂಭವಾಗದಿರಲೂ ಕಾರಣವೇನೆಂದು ವಿಚಾರಿಸಿದರು ಅವುಗಳಲಿ ಹಳಿಯಾಳ ತಾಲೂಕಿನಲ್ಲಿ ಅತೀ ಹೆಚ್ಚು ಮನೆಗಳು Unstarted ಇರಲೂ ಕಾರಣವೆನು? ಎಂದು ವಿಚಾರಿಸಿ ಈವರೆಗೆ ಪ್ರಾರಂಭವಾಗದಿರುವ ಮನೆಗಳ ಫಲಾನುಭವಿಗಳಿಗೆ ನೋಟಿಸು ಜ್ಯಾರಿಮಾಡಿ ಮನೆಯನ್ನು ರದ್ದುಪಡಿಸಲು ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಉಪಕಾರ್ಯದರ್ಶಿಗಳು (ಅಭಿವೃದ್ಧಿ ಶಾಖೆ) ಜಿಲ್ಲಾ ಪಂಚಾಯತ, ಉ.ಕ )**

## 8. NRDWSP: ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ

ಜಲ ನಿರ್ಮಲ ಯೋಜನೆಯಡಿಯಲ್ಲಿ ಈಗಾಗಲೇ ಅನೇಕ ಗ್ರಾಮಗಳಲ್ಲಿ ನಲ್ಲಿ ಸಂಪರ್ಕವನ್ನು ನೀಡಲಾಗಿದ್ದು, ಅಂತಹ ಫಲಾನುಭವಿಗಳನ್ನು ಪುನಃ JJM (ಜಲ್ ಜೀವನ ಮಿಷನ್) ಯೋಜನೆಯಡಿಯಲ್ಲಿ ತೆಗೆದುಕೊಂಡರೆ ಅದು ದೊಡ್ಡ ಹಗರಣಕ್ಕೆ ಎಡೆ ಮಾಡಿಕೊಡುವುದು. ಆದ್ದರಿಂದ ದಿಶಾ ಸಮಿತಿಯ ಸದಸ್ಯರು ಆಯಾ ಕ್ಷೇತ್ರದ ಮಾನ್ಯ ಶಾಸಕರನ್ನು ಸಂಪರ್ಕಿಸಿ ಈ JJM ಯೋಜನೆಯಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ದಾಖಲಾತಿಗಳನ್ನು ಪರಿಶೀಲಿಸಲು ಸೂಚಿಸಿದರು. ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರರು ಆಯಾ ತಾಲೂಕಿನಲ್ಲಿ ಪ್ರತಿಯೊಂದು ಕುಟುಂಬಗಳಿಗೆ ವೈಯಕ್ತಿಕ ನಲ್ಲಿ ಸಂಪರ್ಕ ಕಲ್ಪಿಸುವ ಕುರಿತು ಕಾಮಗಾರಿ ಕೈಗೊಳ್ಳಲು ಸೂಚಿಸಿದರು. ಈ ಕುರಿತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಈಗಾಗಲೇ ತಯಾರಿಸಲಾಗಿರುವ DPR ಗಳನ್ನು ಜಲನಿರ್ಮಲ ಯೋಜನೆಯಡಿ ತೆಗೆದುಕೊಂದ ಕಾಮಗಾರಿಗಳ ದಾಖಲೆ ಹಾಗೂ JJM ಯೋಜನೆಯ ದಾಖಲೆಗಳೊಂದಿಗೆ ಪರಿಶೀಲಿಸಿ ಯಾವುದೇ ಹಗರಣ ಆಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಲು ಸೂಚಿಸಿದರು ಹಾಗೂ ಈ ಯೋಜನೆಯಿಂದ ಪ್ರತಿಯೊಬ್ಬರಿಗೆ 55 ಎಲ್.ಪಿ.ಸಿ.ಡಿ ನೀರನ್ನು ಒದಗಿಸಲು ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜೀನಿಯರರು, ಗ್ರಾಮೀಣ ಕುಡಿಯುವ ನೀರು ವಿಭಾಗ, ಕಾರವಾರ)**

## 9. ಮಹಿಳಾ ಮತ್ತು ಮಕ್ಕಳ ಕುಟುಂಬ ಕಲ್ಯಾಣ ಇಲಾಖೆ/ವಿಕಲಚೇತನ :

ಜಿಲ್ಲೆಯಲ್ಲಿ ಯು.ಡಿ.ಐ.ಡಿ ಯೋಜನೆಯಡಿಯಲ್ಲಿ ಗುರುತಿನ ಚೀಟಿ ವಿತರಣೆ ಕುರಿತು ಚರ್ಚಿಸಿ ಈವರೆಗೆ ವಿಕಲಚೇತನರಿಗೆ ಎಷ್ಟು ಗುರುತಿನ ಚೀಟಿ ವಿತರಿಸಲಾಗಿದೆ ಹಾಗೂ ಯಾವ ಯಾವ ತಾಲೂಕುಗಳಲ್ಲಿ ಎಷ್ಟು ಬಾಕಿ ಇದೆ ಎಂದು ಪ್ರಶ್ನಿಸಿ ಗುರುತಿ ಚೀಟಿ ವಿತರಿಸುವಲ್ಲಿ ಇಲಾಖೆ ವಿಫಲವಾಗಿದೆ ಎಂದು ಸಭಾಧ್ಯಕ್ಷರು ತಿಳಿಸಿದರು. ಇದಕ್ಕೆ ಉತ್ತರವಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಕಲ್ಯಾಣಾಧಿಕಾರಿಗಳು ಜಿಲ್ಲೆಯಲ್ಲಿ 16331 ವಿಕಲಚೇತನರನ್ನು ಗುರುತಿಸಿದ್ದು, ಈವರೆಗೆ 14742 ವಿಕಲಚೇತನರಿಗೆ ಗುರುತಿನ ಚೀಟಿ ವಿತರಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಆದರೆ ಸದ್ರಿ ಪ್ರಗತಿಯು ಕಳೆದ 6 ತಿಂಗಳ ಹಿಂದಿನ ಸಭೆಯಲ್ಲಿಯೇ ಆಗಿದ್ದು, ಬಾಕಿ ಉಳಿದ 2000 ವಿಕಲಚೇತನರಿಗೆ ಕಾರ್ಡನ್ನು ಇವರೆಗೂ ವಿತರಿಸದೇ ಇರುವ ಕುರಿತು ಮಾಹಿತಿಯನ್ನು ಕೇಳಿದ್ದಲ್ಲದೇ ಈ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿ ತಾಲೂಕಿನಲ್ಲಿ ಆಯಾ ತಾಲೂಕಾ ಕೇಂದ್ರದಲ್ಲಿ ಪ್ರತಿ ತಿಂಗಳು ಒಂದು ಬಾರಿ ವಿಕಲಚೇತನರಿಗೆ ಯು.ಡಿ.ಐ.ಡಿ ಕಾರ್ಡ ವಿತರಿಸಲು ಕ್ರಮ ವಹಿಸುವುದು ಹಾಗೂ ಜನೇವರಿ ತಿಂಗಳ ಅಂತ್ಯದೊಳಗೆ ಬಾಕಿಯಿರುವ ಎಲ್ಲಾ ವಿಕಲಚೇತನರಿಗೆ ಕಾರ್ಡ ವಿತರಿಸಿ ವರದಿ ನೀಡಲು ಸಭಾಧ್ಯಕ್ಷರು ಸೂಚಿಸಿದರು.ವಿಕಲಚೇತನರಿಗೆ ಕಾರ್ಡ ವಿತರಿಸುವಲ್ಲಿ ಆದ ವಿಳಂಬ ಕುರಿತು ತೀವ್ರ ಬೇಸರ ವ್ಯಕ್ತಪಡಿಸಿ ಜನೇವರಿ ತಿಂಗಳ ಅಂತ್ಯದೊಳಗೆ ಇಲಾಖಾ ಅಧಿಕಾರಿಗಳು ಯು.ಡಿ.ಐ.ಡಿ ಕಾರ್ಡ ವಿತರಿಸಲು ವಿಫಲರಾದಲ್ಲಿ ಅವರ ಮೇಲೆ ಕ್ರಮ ವಹಿಸಲು ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಅಧಿಕಾರಿ, ಕಾರವಾರ)**

## 10. ಕೌಶಲ್ಯಾಭಿವೃದ್ಧಿ ಇಲಾಖೆ (Skill):

ಜಿಲ್ಲೆಯಲ್ಲಿ ಸ್ಕಿಲ್ ಮ್ಯಾಪಿಂಗ್ ಹಾಗು ಇನ್ನಿತರ ಕೌಶಲ್ಯಾಭಿವೃದ್ಧಿ ಚಟುವಟಿಕೆ ಮಾಡುವ ಕುರಿತು ಜಿಲ್ಲಾ ಸಮಿತಿಯಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತ್ವರಿತವಾಗಿ ಸಭೆ ಕರೆಯಲು ಸಭಾಧ್ಯಕ್ಷರು ಸೂಚಿಸಿದರು.

ಈವರೆಗೆ ಜಿಲ್ಲಾ ಮಟ್ಟದಲ್ಲಿ ಲೀಡ್ ಬ್ಯಾಂಕ್,ಆರ್‌ಸೆಟಿ ಹಳಿಯಾಳ ಮತ್ತು ಕುಮಟಾ ವತಿಯಿಂದ ಹಾಗೂ ಕೌಶಲ್ಯಾಬಿವೃದ್ದಿ ಇಲಾಖೆ ವತಿಯಿಂದ ಸರ್ವೇ ಕಾರ್ಯ ಮಾಡಿರುವುದಕ್ಕೆ ಡಾಟಾ ಇಂಟಿಗ್ರೇಷನ್ ಮಾಡಲಾಗಿದೆಯೇ? ಎಂದು ವಿಚಾರಿಸಲಾಗಿ ಅದಕ್ಕೆ ಉತ್ತರಿಸಲು ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲಿಲ್ಲ. ಅದಕ್ಕೆ ತುಂಬಾ ವಿಷಾದ ವ್ಯಕ್ತಪಡಿಸಿ ಕೂಡಲೇ ಕೌಶಲ್ಯಾಭಿವೃದ್ಧಿ ಅಧಿಕಾರಿಗಳನ್ನು ಸಭೆಗೆ ಕರೆಯಲು ತಿಳಿಸಿ ಗೈರಾದ ಅಧಿಕಾರಿಗಳಿಗೆ ನೋಟಿಸ್ ನೀಡಲು ಸೂಚಿಸಿದರು ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಯುವ ಎಲ್ಲಾ ಕೌಶಲ್ಯಾಭಿವೃದ್ಧಿ ಚಟುವಟಿಕೆಗಳು ಹಾಗೂ ಸ್ಕೀಲ್ ಮ್ಯಾಪಿಂಗ್ ವಿವರ ಇತ್ಯಾದಿ ಎಲ್ಲಾ ಮಾಹಿತಿಗಳೂ ಜಿಲ್ಲಾ ಸೇಂಟ್ರಲ್ ಡ್ಯಾಸಬೋರ್ಡನಲ್ಲಿ ಕಾಲಕಾಲಕ್ಕೆ ಇಂದೀಕರಿಸುವುದು ಹಾಗು ಈ ಮೂಲಕ ಜಿಲ್ಲೆಯಲ್ಲಿನ ಸಮಗ್ರ ಮಾಹಿತಿ ದೊರಕುವಂತಾಗಬೇಕೆಂದು ಸಭಾದ್ಯಕ್ಷರು ಕೌಶಲ್ಯಾಭಿವೃದ್ಧಿ ಇಲಾಖೆಗೆ ಸೂಚಿಸಿದರು.

**(ಕ್ರಮ : ಕೌಶಲ್ಯಾಭಿವೃದ್ಧಿ ಇಲಾಖೆ/ಲೀಡ್ ಬ್ಯಾಂಕ್/ ಆರ್‌ಸೆಟಿ ಹಳಿಯಾಳ ಮತ್ತು ಕುಮಟಾ)**

## 11. MGNREGA:ಮಹಾತ್ಮಾ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಈ ಯೋಜನೆಯಡಿಯಲ್ಲಿ 100 ಶೇಕಡಾ ರಷ್ಟು ಈಗಾಗಲೇ ಆರ್ಥಿಕವಾಗಿ ಪ್ರಗತಿ ಸಾಧಿಸಲಾಗಿದ್ದು, ಆದರೂ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಮಾನವ ದಿನಗಳನ್ನು ಸೃಜಿಸಲು ಸೂಚಿಸಿದರು. ಅರಣ್ಯ ಹಾಗೂ ಇತರೇ ಇಲಾಖೆಯವರು ಇನ್ನು ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ವಹಿಸಲು ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಉಪಕಾರ್ಯದರ್ಶಿಗಳು (ಅಭಿವೃದ್ಧಿ ಶಾಖೆ) ಜಿಲ್ಲಾ ಪಂಚಾಯತ, ಉ.ಕ )**

## 12. ಅಕ್ಷರದಸೋಹ :

ತಾಲೂಕ ಪಂಚಾಯತ ಅಧ್ಯಕ್ಷರು, ಗ್ರಾಮ ಪಂಚಾಯತ ಜನಪ್ರತಿನೀಧಿಗಳು ಕ್ರಮವಾಗಿ ಶಾಲೆಯಲ್ಲಿ ವಿತರಿಸುವ ಆಹಾರ ಧಾನ್ಯಗಳ ಗುಣಮಟ್ಟವನ್ನು ಪರಿಶೀಲಿಸಬೇಕು ಸರಿಯಿಲ್ಲದಿದ್ದಲ್ಲಿ ದೂರುಗಳನ್ನು ಜಿಲ್ಲಾ ಆಡಳಿತಕ್ಕೆ ಸಲ್ಲಿಸಬೇಕು. ಎಲ್ಲಾ ಶಾಲೆಗಳಲ್ಲಿ ಜಿಲ್ಲಾಧಿಕಾರಿಗಳ Whatsup Number ಅನ್ನು ಪ್ರಕಟಿಸಬೇಕು. ಮಕ್ಕಳು ಸರಿಯಾಗಿ ಆಹಾರವನ್ನು ಸೇವಿಸುವಂತೆ ಗಮನ ಹರಿಸಬೇಕು. ಆಹಾರದ ಗುಣಮಟ್ಟ ಸರಿಯಿಲ್ಲದಿದ್ದರೆ ಮಕ್ಕಳು ಪಾಲಕರ ಮುಖಾಂತರ ದೂರು ನೀಡುವುದರ ಬಗ್ಗೆ ತಿಳುವಳಿಕೆ ನೀಡುವುದು ಹಾಗು ಇದರ ಬಗ್ಗೆ ಇಲಾಖಾ ಗಮನ ಹರಿಸುವುದು.

**(ಕ್ರಮ: ಸಹಾಯಕ ನಿರ್ದೇಶಕರು ಅಕ್ಷರದಾಸೋಹ ವಿಭಾಗ, ಕಾರವಾರ)**

## 13. NRLM: ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ

ಎನ್‌ಆರ್‌ಎಲ್‌ಎಂ ಹಾಗೂ ನಬಾರ್ಡ ಒಗ್ಗೂಡಿಸುವಿಕೆಯಲ್ಲಿ ಕಾರ್ಯಕ್ರಮವನ್ನು ರೂಪಿಸುವ ಅಗತ್ಯವಿರುವುದಾಗಿ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು. ಈ ಕುರಿತು ದಿನಾಂಕ:06.09.2020 ರಂದು ಈಗಾಗಲೇ ಎನ್‌ಆರ್‌ಎಲ್‌ಎಂ ಹಾಗೂ ನಬಾರ್ಡ ಜಂಟಿಯಾಗಿ ಸಭೆ ನಡೆಸಿ ನಬಾರ್ಡ ಪ್ರಾಯೋಜಿತ ಜೀವನೋಪಾಯ ಕಾರ್ಯಕ್ರಮಗಳಲ್ಲಿ ಮಹಿಳಾ ಸಂಘಗಳ ಸದಸ್ಯರನ್ನು ಆದ್ಯತೆಯ ಮೇಲೆ ಪರಿಗಣಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವಂತೆ ಕ್ರಮವಹಿಸಲು ನಿರ್ಣಯಿಸಿರುವುದಾಗಿ ಸಭೆಯಲ್ಲಿ ನಬಾರ್ಡ ಅಧಿಕಾರಿಗಳು ತಿಳಿಸಿದರು.

ಈ ನಿಟ್ಟಿನಲ್ಲಿ ಈಗಾಗಲೇ ಶಿರಸಿ, ಸಿದ್ದಾಪುರ ಭಾಗಗಳಲ್ಲಿ ದೇಶಪಾಂಡೆ ಪೌಂಢೇಶನ್ ಸಹಯೋಗದಲ್ಲಿ ಮಹಿಳಾ ಸಂಘದ ಸದಸ್ಯರಿಗೆ ಬಾಳೆ ಹಣ್ಣಿನ ಸುಕೇಳಿ ತಯಾರಿಕಾ ಘಟಕ ಸ್ಥಾಪಿಸಲು ತರಬೇತಿಗೆ ಕ್ರಮ ವಹಿಸಿರುವುದಾಗಿ ತಿಳಿಸಿದರು. ಅದರಂತೆ ಹೊನ್ನಾವರ ತಾಲೂಕಿನ ಕಾಸರಕೋಡ ಪ್ರದೇಶದಲ್ಲಿ ಮೀನುಗಾರ ಮಹಿಳೆಯರ ಸಂಘಗಳಿಂದ ಒಣ ಮೀನಿನ ಮೌಲ್ಯ ವರ್ಧನೆ (Value addition) ಗಾಗಿ ಸ್ನೇಹಕುಂಜ ಸಂಸ್ಥೆಯ ಸಹಯೋಗದೊಂದಿಗೆ ಒಣಮೀನಿನ ಸಂಸ್ಕರಣಾ ಘಟಕ ಪ್ರಾರಂಭಿಸಲು ಯೋಜನೆ ರೂಪಿಸಿರುವ ಕುರಿತು ಸಭೆಯಲ್ಲಿ ಮಾಹಿತಿಯನ್ನು ವಿವರಿಸಿದರು. ಈ ಕುರಿತು ವಿವರವಾದ ವರದಿಯನ್ನು ನೀಡಲು ನಬಾರ್ಡ ಅಧಿಕಾರಿಗಳಿಗೆ ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

(ಕ್ರಮ: ಡಿಡಿಎಂ ನಬಾರ್ಡ ಮತ್ತು ಎನ್‌ಆರ್‌ಎಲ್‌ಎಂ)

**ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು**

ಲೋಕಸಭಾ ಸದಸ್ಯರು ಉತ್ತರ ಕನ್ನಡ ಕ್ಷೇತ್ರ–12 ಹಾಗೂ
ಅಧ್ಯಕ್ಷರು ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ
ಮತ್ತು ಉಸ್ತುವಾರಿ (ದಿಶಾ) ಸಮಿತಿ,
ಉತ್ತರ ಕನ್ನಡ

ಸಂ:ಉ.ಕ/ಜಿ.ಪಂ/(ದಿಶಾ)/ಸಿಆರ್-72/2020-21

ಜಿಲ್ಲಾ ಪಂಚಾಯತ ಕಾರ್ಯಾಲಯ, ಉ.ಕ
(ಎನ್‌ಆರ್‌ಎಲ್‌ಎಮ್ ಶಾಖೆ)
ಕಾರವಾರ ದಿನಾಂಕ:23-02-2021

**ಪ್ರತಿ ಗೌರವಪೂರ್ವಕವಾಗಿ ಮಾಹಿತಿಗಾಗಿ.**

1. ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭಾ, ವಿಧಾನ ಸೌಧ ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಸನ್ಮಾನ್ಯ ಸಭಾಧ್ಯಕ್ಷರ ಆದ್ಯ ಗಮನಕ್ಕೆ ತರಲು ಕೋರಿದೆ.
2. ಶ್ರೀ ಅರಬೈಲ್ ಶಿವರಾಂ ಹೆಬ್ಬಾರ ಮಾನ್ಯ ಕಾರ್ಮಿಕ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು ವಿಧಾನ ಸೌಧ ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಸನ್ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
3. ಸನ್ಮಾನ್ಯ ಶ್ರೀ ಅನಂತಕುಮಾರ ಹೆಗಡೆ, ಮಾನ್ಯ ಲೋಕಸಭಾ ಸದಸ್ಯರು, ಉತ್ತರ ಕನ್ನಡ ಕ್ಷೇತ್ರ-12, ಕಾರವಾರ ಇವರ ಆಪ್ತಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಮಾನ್ಯ ಸಂಸದರ ಆದ್ಯ ಗಮನಕ್ಕೆ ತರಲು ಕೋರಿದೆ.
4. ಮಾನ್ಯ ಶ್ರೀ ಆರ್ ವಿ ದೇಶಪಾಂಡೆ, ವಿಧಾನ ಸಭಾ ಸದಸ್ಯರು, ಹಳಿಯಾಳ
5. ಮಾನ್ಯ ಶ್ರೀಮತಿ ರೂಪಾಲಿ ಸಂತೋಷ ನಾಯ್ಕ, ವಿಧಾನ ಸಭಾ ಸದಸ್ಯರು, ಕಾರವಾರ
6. ಮಾನ್ಯ ಶ್ರೀ ದಿನಕರ ಕೆ. ಶೆಟ್ಟಿ, ವಿಧಾನ ಸಭಾ ಸದಸ್ಯರು, ಕುಮಟಾ
7. ಮಾನ್ಯ ಶ್ರೀ ಸುನೀಲ ಬಿ. ನಾಯ್ಕ, ವಿಧಾನ ಸಭಾ ಸದಸ್ಯರು, ಭಟ್ಕಳ
8. ಮಾನ್ಯ ಶ್ರೀ ಎಸ್. ಎಲ್ ಘೋಟ್ನೇಕರ್, ವಿಧಾನ ಪರಿಷತ್ ಸದಸ್ಯರು, ಹಳಿಯಾಳ
9. ಮಾನ್ಯ ಶ್ರೀ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯರು, ಹುಬ್ಬಳ್ಳಿ
10. ಮಾನ್ಯ ಶ್ರೀ ಎಸ್. ವಿ ಸಂಕನೂರ, ವಿಧಾನ ಪರಿಷತ್ ಸದಸ್ಯರು, ಗದಗ
11. ಮಾನ್ಯ ಶ್ರೀ ಶಾಂತಾರಾಮ ಸಿದ್ಧಿ, ವಿಧಾನ ಪರಿಷತ್ ಸದಸ್ಯರು, ಯಲ್ಲಾಪುರ
12. ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ, ಉತ್ತರ ಕನ್ನಡ ಕಾರವಾರ
13. ಮಾನ್ಯ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ
14. ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ ಅಧ್ಯಕ್ಷರುಗಳು.
15. ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಸಭೆಯ ಎಲ್ಲಾ ನಾಮನಿರ್ದೇಶಿತ ಸದಸ್ಯರುಗಳು.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ನಡುವಳಿ ಮೇಲೆ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿ ರವಾನಿಸಿದೆ.**

1. ಎಲ್ಲಾ ಶಾಖಾ ಮುಖ್ಯಸ್ಥರು, ಜಿಲ್ಲಾ ಪಂಚಾಯತ ಉತ್ತರ ಕನ್ನಡ, ಕಾರವಾರ
2. ಸಹಾಯಕ ಕಮೀಶನರ್, ಕಾರವಾರ/ಕುಮಟಾ/ಭಟ್ಕಳ/ಶಿರಸಿ.
3. ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಸಂಬಂಧ ಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ.

ಯೋಜನಾ ನಿರ್ದೇಶಕರು (ಪ್ರಭಾರ) ಡಿ.ಆರ್.ಡಿ.ಎ
~~ಜಿಲ್ಲಾ~~ ಪಂಚಾಯತ, ಉತ್ತರ ಕನ್ನಡ ಕಾರವಾರ